ಇ ಮೇಲ್: gfgcvb@yahoo.co.in Phone /Fax: 080 23302141

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

# ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ ಬೆಂಗಳೂರು 560040

ಸಂಖ್ಯೆ :ಸಪ್ರದಕಾವಿಬೆಂ/19/ಬಿ.ಎ/ಬಿಕಾಂ/ಬಿ.ಎಸ್ಸಿ/ಬಿ.ಬಿ.ಎ/2018-19 ಪ್ರಾಚಾರ್ಯರ ಕಾರ್ಯಾಲಯ,

ದಿನಾಂಕ : 05-05-2018.

## 2018-19 ರ ಪ್ರವೇಶಾತಿ ಅಧಿಸೂಚನೆ

**ವಿಷಯ :** ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2018-19ನೇ ಶೈಕ್ಷಣಿಕ ಸಾಲಿಗೆ ದಿನಾಂಕ: 03-05-2018 ರಿಂದ ಪ್ರಥಮ ವರ್ಷದ ಬಿ.ಎ., ಬಿ.ಕಾಂ., ಬಿ.ಎಸ್ಸಿ ಮತ್ತು ಬಿ.ಬಿ.ಎ ತರಗತಿಗಳಿಗೆ ಪ್ರವೇಶಾತಿಯ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:** :1) ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ: ಕಾಶಿಇ/ಶೈವಿ/24/ಪ್ರವೇಶಾತಿ/2018-19 ದಿನಾಂಕ: 02-05-2018

2) BUB Notification No: Aca-I/A1/UG-calendar of Events/2018-19 Date: 12-04-2018

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸುತ್ತೋಲೆಯನ್ವಯ ಬೆಂಗಳೂರಿನ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2018-19ನೇ ಶೈಕ್ಷಣಿಕ ಸಾಲಿಗೆ ದಿನಾಂಕ: 07-05-2018 ರಿಂದ ಪ್ರಥಮ ವರ್ಷದ ಬಿ.ಎ., ಬಿ.ಕಾಂ., ಬಿ.ಎಸ್ಸಿ ಮತ್ತು ಬಿ.ಬಿ.ಎ ತರಗತಿಗಳಿಗೆ ಪ್ರವೇಶಾತಿಯ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಪ್ರವೇಶಾತಿಯ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಆದ್ದರಿಂದ ಆಸಕ್ತ ವಿದ್ಯಾರ್ಥಿಗಳು ಪ್ರವೇಶಾತಿಯ ಅರ್ಜಿ ಹಾಗೂ ಕಾಲೇಜಿನ ಪರಿಚಯ ಪತ್ರಿಕೆ (Prospectors) ವಿವರಗಳಿಗಾಗಿ ಕಾಲೇಜಿನ ವೈಬ್‌ಸೈಟ್ **http://gfgc.kar.nic.in/vijayanagar** ಕ್ಕೆ ಬೇಟಿ ನೀಡಿಬಹುದು. ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶಾತಿ ಬಯಸಿ **ಮೊದಲು ಬಂದವರಿಗೆ ಆದ್ಯತೆ ಮೇರೆಗೆ** ಪ್ರವೇಶಾತಿ ನೀಡಲಾಗುವುದು.

01) ಪ್ರಥಮ ವರ್ಷದ ವಿದ್ಯಾರ್ಥಿಗಳು ನೇರವಾಗಿ **http://gfgc.kar.nic.in/vijayanagar** ಈ ವೆಬ್‌ಸೈಟ್/ಇಂಟರ್‌ನೆಟ್ ಕೇಂದ್ರಕ್ಕೆ ಭೇಟಿ ನೀಡಿ Admission Icon Clik ಮಾಡಿ ಪ್ರವೇಶಾತಿಯ ಅರ್ಜಿ ನಮೂನೆಗಳನ್ನು Download ಮಾಡಿಕೊಂಡು ಅದನ್ನು ಕಂಪ್ಯೂಟರ್‌ನಲ್ಲಿಯೇ ಭರ್ತಿ ಮಾಡಿ ಅದರ ಒಂದು ಪ್ರತಿಯನ್ನು ಪ್ರಿಂಟ್‌ಔಟ್ ಪಡೆದುಕೊಂಡು ಕೆಳಕಂಡ ದಾಖಲೆಗಳೊಂದಿಗೆ ಅರ್ಜಿಯನ್ನು ಪರಿಶೀಲನೆಗಾಗಿ ನೇರವಾಗಿ ಕಾಲೇಜಿನ ಕಛೇರಿಯ ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಸಲ್ಲಿಸಬೇಕು.

02) ಪಿ.ಯು ಬೋರ್ಡ್‌ನಿಂದ ನಡೆಸಲಾಗುವ ಪರೀಕ್ಷೆಯಲ್ಲಿ ನೇರವಾಗಿ ಪಿ.ಯು.ಸಿ 2ನೇ ವರ್ಷದ ಬಾಹ್ಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ಅಂತಹ ವಿದ್ಯಾರ್ಥಿಗಳಿಗೂ ಸಹ ಪ್ರವೇಶಾತಿಗೆ ಅವಕಾಶವಿದೆ.

03) ಪಿ.ಯು.ಸಿ. ಅಂಕಪಟ್ಟಿಯಲ್ಲಿರುವಂತೆ ಹೆಸರು ಮತ್ತು ಮೊಬೈಲ್ ಫೋನ್ ಸಂಖ್ಯೆ ಹಾಗೂ ಇ-ಮೇಲ್ ಐ.ಡಿ. ಯನ್ನು ಪ್ರವೇಶಾತಿ ಅರ್ಜಿಯಲ್ಲಿ ಸರಿಯಾಗಿ ನಮೂದಿಸಬೇಕು.

04). ಕಾಲೇಜಿನಲ್ಲಿರುವ ವಿಷಯಗಳ ಕಾಂಬಿನೇಷನ್ ಮಾತ್ರ ಅರ್ಜಿಯಲ್ಲಿ ನಮೂದಿಸಬೇಕು. ಮತ್ತು ವಿಷಯಗಳು ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

**05). ಅಭ್ಯರ್ಥಿಗಳು ವಿಷಯ ನಿರ್ವಾಹಕರ ಪರಿಶೀಲನೆಗೆ ಹಾಜರ ಪಡಿಸಬೇಕಾದ ಪ್ರವೇಶಾತಿಯ ದಾಖಲೆಗಳು.**

ಎಲ್ಲಾ ಮೂಲ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಕೆಳಕಂಡ ಕ್ರಮಾಂಕದಲ್ಲಿ ಪರಿಶೀಲನೆಗೆ ಹಾಜರುಪಡಿಸಬೇಕು..(ಇವುಗಳನ್ನು ಯಾವುದೇ ಕಾರಣಕ್ಕೂ ಲಗತ್ತಿಸಿರಬಾರದು. )

1) ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಯನ್ನು ಮಾತ್ರ ಪ್ರತ್ಯೇಕವಾಗಿ ವಿಷಯ ನಿರ್ವಾಹಕರಿಗೆ ಒಪ್ಪಿಸಿ ಸ್ವೀಕೃತಿ ಪತ್ರ ಪಡೆಯುವುದು. ಮತ್ತು ಅಂಕಪಟ್ಟಿ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.

2) ದ್ವಿತೀಯ ವರ್ಷದ ಪ್ರಾವಿಸನಲ್ ಮಾರ್ಕ್ಸ್‌ಕಾರ್ಡ್ ಮೂಲ ಪಿ.ಯು. ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಿಸಿ ಒಂದು ಪ್ರತಿಯನ್ನು ಲಗತ್ತಿಸಬೇಕು. ಮೂಲ ಅಂಕಪಟ್ಟಿಯನ್ನು ನಿಗಧಿತ ಸಮಯದೊಳಗೆ ವಿಷಯ ನಿರ್ವಾಹಕರ ಪರಿಶೀಲನೆಗೆ ಹಾಜರು ಪಡಿಸಿ ಅದರ ದೃಢೀಕೃತ ಒಂದು ಪ್ರತಿಯನ್ನು ಒಪ್ಪಿಸುವುದು.

3) ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ದ್ವಿಪ್ರತಿ ಲಗತ್ತಿಸಬೇಕು. (ಎಸ್.ಸಿ / ಎಸ್.ಟಿ. ಆದಾಯ ಮಿತಿ ಪ್ರಾಂಶುಪಾಲರಿಂದ ಕಡ್ಡಾಯವಾಗಿ ದೃಢೀಕರಿಸರಬೇಕು. : ರೂ. 2.5 ಲಕ್ಷ, ಕೆಟಗರಿ-1 ಮತ್ತು ಹಿಂದುಳಿದ ವರ್ಗಗಳಿಗೆ ಆದಾಯ ಮಿತಿ ರೂ. 1 ಲಕ್ಷ. ಒಂದು ವೇಳೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ಸಂಬಂಧಿಸಿದ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದರೆ ಅದರ ಸ್ವೀಕೃತಿ ಪತ್ರವನ್ನು ಅರ್ಜಿಗೆ ಕಡ್ಡಾಯವಾಗಿ ಲಗತ್ತಿಸಬೇಕು.

4) ಅಂಗವಿಕಲ ವಿದ್ಯಾರ್ಥಿಗಳಾಗಿದ್ದಲ್ಲಿ ಅಥವಾ ಮಾಜಿ ಸೈನಿಕರ ಮಕ್ಕಳಾಗಿದ್ದಲ್ಲಿ ಸಂಬಂಧಿಸಿದ ದಾಖಲಾತಿಗಳನ್ನು ದ್ವಿಪ್ರತಿ ಲಗತ್ತಿಸಬೇಕು.

5) ಪಿ.ಯು.ಸಿ ನಂತರ ಶಿಕ್ಷಣ ಕುಂಠಿತಗೊಂಡಿದ್ದರೆ ಈ ಬಗ್ಗೆ 20 ರೂಪಾಯಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪ್ರಮಾಣ ಪತ್ರ ಲಗತ್ತಿಸಬೇಕು.

6) ಆಧಾರ ಕಾರ್ಡ ಝರಾಕ್ಸ ದ್ವಿಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.

7) ಕಾಲೇಜಿನ ನಿಯಮಾವಳಿ ಪಾಲಿಸಲು ಮುಚ್ಚಳಿಕೆ ಪತ್ರ ನಮೂನೆ ಲಗತ್ತಿಸಿರಬೇಕು.
(**http://gfgc.kar.nic.in/vijayanagar/**ಇಂಟರನೆಟ್ ಕೇಂದ್ರಗಳಲ್ಲಿ ದೊರಕುವುದು.)

8) ಗುರುತಿನ ಚೀಟಿಗಾಗಿ (ID Card) ಅರ್ಜಿ ನಮೂನೆ ತುಂಬಿ ಲಗತ್ತಿಸಬೇಕು.
(**http://gfgc.kar.nic.in/vijayanagar/ಇಂಟರನೆಟ್ ಕೇಂದ್ರಗಳಲ್ಲಿ ದೊರಕುವುದು.**)

9) ಕರ್ನಾಟಕ ಬ್ಯಾಂಕ್ ಪಾಸ್‌ಬುಕ್‌ನ ಝೇರಾಕ್ಸ ಪ್ರತಿಯನ್ನು ಲಗತ್ತಿಸುವುದು.

10) **ವರ್ಗಾವಣೆ ಪತ್ರ ಲಗತ್ತಿಸದೆ ಇದ್ದಲ್ಲಿ,** ವರ್ಗಾವಣೆ ಪ್ರಮಾಣ ಪತ್ರವನ್ನು ಪಿಯುಸಿ ಪಾಸಾದ ಕಾಲೇಜಿನಿಂದ ತರಿಸಲು ಅರ್ಜಿ ನಮೂನೆ ಯನ್ನು ತುಂಬಿ 3 ಪ್ರತಿಯಲ್ಲಿ ಲಗತ್ತಿಸಿರಬೇಕು.
(**http://gfgc.kar.nic.in/vijayanagar/ಇಂಟರನೆಟ್ ಕೇಂದ್ರಗಳಲ್ಲಿ ದೊರಕುವುದು.**)ಮೂಲ ವರ್ಗಾವಣೆ ಪ್ರಮಾಣ ಪತ್ರ ಇದ್ದಲ್ಲಿ ಅದನ್ನು ಲಗತ್ತಿಸಬೇಕು.

11) **ಅರ್ಜಿ ಮತ್ತು ದಾಖಲೆಗಳ ನಮೂನೆ ದೊರಕುವ ಸ್ಥಳ: (http://gfgc.kar.nic.in/vijayanagar/ಇಂಟರನೆಟ್ ಕೇಂದ್ರಗಳಲ್ಲಿ ದೊರಕುವುದು.)**

06) ಪ್ರವೇಶಾತಿಯ ಮತ್ತು ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಆನ್‌ಲೈನ್ ಮೂಲಕ ವಿದ್ಯಾರ್ಥಿಗಳು ಈ ಕಾಲೇಜಿಗೆಪಾವತಿಸಬೇಕಾಗಿರುವದರಿಂದ ವಿದ್ಯಾರ್ಥಿಗಳು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ವಿಶೇಷವಾಗಿ ಕರ್ನಾಟಕ ಬ್ಯಾಂಕಿನಲ್ಲಿ ವಿದ್ಯಾರ್ಥಿಗಳು ಖಾತೆ ಹೊಂದಿರಬೇಕು.

07) ಒಂದು ವೇಳೆ ಬ್ಯಾಂಕ್ ಖಾತೆ ಹೊಂದಿರದೇ ಇದ್ದಲ್ಲಿ ಬೆಂಗಳೂರಿನ ವಿಜಯನಗರದ ಶಾಖೆಯ ಕರ್ನಾಟಕ ಬ್ಯಾಂಕ್ ಇವರಿಂದ ನೋ ಫ್ರಿಲ್ ಅಕೌಂಟ್ ಅರ್ಜಿ ನಮೂನೆಯನ್ನು ಪಡೆದು ವಿದ್ಯಾರ್ಥಿಗಳು ಬ್ಯಾಂಕ್ ಅಕೌಂಟ್‌ತೆರೆಯಬೇಕು ಮತ್ತು ಕಾಲೇಜಿನಲ್ಲಿ ಪ್ರವೇಶಾತಿಗೆ ನಿಗದಿ ಪಡಿಸಿದ ಮೊತ್ತವನ್ನು ಸದರಿ ಖಾತೆಯಲ್ಲಿ ಜಮಾ ಮಾಡಿರಬೇಕು. ಪಾಸ್‌ಬುಕ್ಕಿನ ಝರಾಕ್ಸ ಪ್ರತಿ ಲಗತ್ತಿಸಿರಬೇಕು (ದ್ವಿಪ್ರತಿ)

08) ಕಾಲೇಜಿಗೆ ಸಲ್ಲಿಸುವ ಯಾವುದೇ ದಾಖಲೆಗಳನ್ನು ಯಾವುದೇ ಕಾರಣಕ್ಕೂ ಮರಳಿ ನೀಡಲಾಗುವದಿಲ್ಲ. ಆದ್ದರಿಂದ ಈ ಕಾಲೇಜಿಗೆ ಸಲ್ಲಿಸುವ ಯಾವುದೇ ದಾಖಲೆಗಳು ಇದ್ದರು ಅದರ ಒಂದು ಅಥವಾ ಹೆಚ್ಚಿನ ಝರಾಕ್ಸ್ ಪ್ರತಿಗಳನ್ನು ವಿದ್ಯಾರ್ಥಿಗಳು ತಮ್ಮ ಕಡತದಲ್ಲಿ ಸಂರಕ್ಷಿಸಿಕೊಳ್ಳಬೇಕು.

09) ಕಾಲೇಜನಿಂದ ನೀಡುವ ಯಾವುದೇ ದಾಖಲೆ ಇದ್ದರೂ ಅದನ್ನು ಅಂತಿಮ ವರ್ಷದ ಪದವಿ ಮುಗಿವಯವವರೆಗೆ ವಿದ್ಯಾರ್ಥಿಗಳು ತಮ್ಮಲ್ಲಿ ರಕ್ಷಿಸಿಕೊಳ್ಳತಕ್ಕದ್ದು. ಮತ್ತು ಕಾಲೇಜಿನ ಅಧಿಕಾರಿಗಳು ಕೇಳಿದಾಗ ಹಾಜರಪಡಿಸತಕ್ಕದ್ದು.

10) **ವಿಶೇಷ ಸೂಚನೆ :- ಆನ್‌ಲೈನ್ ನಲ್ಲಿ ಡೌನ್‌ಲೋಡ್ ಮಾಡಿದ ಭರ್ತಿ ಮಾಡಿರುವ ಪ್ರವೇಶಾತಿಯ ಅರ್ಜಿಯನ್ನು ದೃಢೀಕೃತ ದಾಖಲಾತಿಗಳೊಂದಿಗೆ ಕೆಳಕಂಡ ಕ್ರಮಾನುಗತಿಯಲ್ಲಿ (ದಾಖಲೆಗಳನ್ನು) ಜೋಡಿಸಿ ಕಾಲೇಜಿನ ಕಛೇರಿಯ ವಿಷಯನಿರ್ವಾಹಕರಿಗೆ ಒಪ್ಪಿಸಿ Acknowledgment ಪಡೆಯಬೇಕು. (ಪ್ರತಿ ದಾಖಲಾತಿಯ ಬಲಭಾಗದ ಮೂಲೆಯ ಮೇಲೆ ಕೆಳಕಂಡ ಕ್ರಮಸಂಖ್ಯೆಯನ್ನು ಬರೆಯತಕ್ಕದ್ದು)**

| ಸಂಖ್ಯೆ | ಸಲ್ಲಿಸಬೇಕಾಗಿರುವ ದಾಖಲೆಗಳು |
|---|---|
| 1 | ಕನ್ನಡ ಮಾಧ್ಯಮದಲ್ಲಿರುವ ಅರ್ಜಿ (ಭಾವಚಿತ್ರದೊಂದಿಗೆ) |
| | ಎಸ್.ಎಸ್.ಎಲ್.ಎಸಿ ಅಂಕಪಟ್ಟಿಯ ಜೆರಾಕ್ಸ್ ಮಾಡಿಸಿದ ದೃಢೀಕೃತ ಪ್ರತಿಗಳು |
| 2 | ದ್ವಿತೀಯ ಪಿ.ಯು.ಸಿ ಮೂಲ ಮತ್ತು ಜೆರಾಕ್ಸ್ ಮಾಡಿಸಿದ ದೃಢೀಕೃತ ಅಂಕಪಟ್ಟಿಗಳು |
| 3 | ಜಾತಿ ಮತ್ತು ಆದಾಯ ಪ್ರಮಾಣದ ಪತ್ರಗಳ ಜೆರಾಕ್ಸ್ ಮಾಡಿಸಿದ ದೃಢೀಕೃತ ಪ್ರತಿಗಳು ( ಆದಾಯ ಮಿತಿ- ಎಸ್.ಸಿ. 2.5 ಲಕ್ಷ, ಉಳಿದ ಎಲ್ಲಾ ವರ್ಗದವರಿಗೆ 1 ಲಕ್ಷ) ಒಂದು ವೇಳೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ಸಂಬಂಧಿಸಿದ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದರೆ ಅದರ ಸ್ವೀಕೃತಿ ಪತ್ರವನ್ನು ಅರ್ಜಿಗೆ ಕಡ್ಡಾಯವಾಗಿ ಲಗತ್ತಿಸಬೇಕು |
| 4 | ಅಂಗವಿಕಲ/ಮಾಜಿ ಸೈನಿಕರ ಮಕ್ಕಳು ಇದ್ದಲ್ಲಿ ಪ್ರಮಾಣದ ಪತ್ರಗಳ ಜೆರಾಕ್ಸ್ ಮಾಡಿಸಿದ ದೃಢೀಕೃತ ಪ್ರತಿಗಳು |
| | ಪಿ.ಯು.ಸಿ. ತೇರ್ಗಡೆಯಾಗಿ ಹಿಂದಿನ ವರ್ಷಗಳಲ್ಲಿ ಪದವಿ ತರಗತಿಗೆ ಪ್ರವೇಶಾತಿ ಪಡೆಯದೇ ವ್ಯಾಸಂಗ ಕುಂಠಿತಗೊಂಡಿದ್ದರೆ 20 ರೂ. ಛಾಪ ಕಾಗದದ ಅಫಿಡವಿಟ್ |
| 5 | ಆಧಾರ್ ಕಾರ್ಡ್‌ನ ದೃಢೀಕೃತ ಪ್ರತಿಗಳು |
| 6 | ಮುಚ್ಚಳಿಕೆ ಪತ್ರ |
| 7 | ಗುರುತಿನ ಪತ್ರದ ಜೆರಾಕ್ಸ್ ಪ್ರತಿ |
| 8 | ಬ್ಯಾಂಕಿನ ಪಾಸ್ ಬುಕ್‌ನ ಜೆರಾಕ್ಸ್ ಪ್ರತಿ |
| 9 | ವರ್ಗಾವಣೆ ಪ್ರಮಾಣ ಪತ್ರ (ವರ್ಗಾವಣೆ ಪ್ರಮಾಣ ಪತ್ರ ಸಲ್ಲಿಸದೇ ಇದ್ದಲ್ಲಿ ವರ್ಗಾವಣೆ ಪತ್ರ ತರಿಸುವುದಕ್ಕಾಗಿ ವೆಬ್‌ಸೈಟ್ ನಲ್ಲಿರು ಟಿ.ಸಿ. ಅರ್ಜಿ ಸಮೂನೆ 03 ಪ್ರತಿಯಲ್ಲಿ ಲಗತ್ತಿಸಬೇಕು |